ಇ) ೧೯೮೪-೮೫ನೇ ಸಾಲಿನಲ್ಲಿ ೧೨,೩೦೦-೦೦ ರೂಪಾಯಿಗಳನ್ನು ಜೀಪೋಪಕರಣಗಳಿಗೆ ಮಂಜೂರು ಮಾಡಿದೆ. ೧೯೮೫-೮೬ನೇ ಮತ್ತು ೧೯೮೬-೮೭ನೇ ಸಾಲಿಗೆ ಹಣ ಮಂಜೂರಾಗಿರುವುದಿಲ್ಲ.

ಈ) ಬಂದಿದೆ. ಶಾಲಾ ಕಟ್ಟಡಗಳ ದುರಸ್ತಿಗೆ ಪ್ರತಿ ವರ್ಷವೂ ಹಣ ಬಿಡುಗಡೆ ಮಾಡಲಾಗುತ್ತಿದೆ. ಈ ವರ್ಷವೂ ದುರಸ್ತಿ ಕೆಲಸಕ್ಕಾಗಿ ಜಿಲ್ಲಾಧಿಕಾರಿಗಳು ಚಿತ್ರದುರ್ಗ ಇವರಿಗೆ ರೂ. ೪,೫೦,೦೦೦-೦೦ ಬಿಡುಗಡೆ ಮಾಡಿದೆ.

ಹೆಚ್.ಡಿ. ಕೋಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯವರಿಂದ ಮಾಡಿರುವ ವೆಚ್ಚದ ಬಗ್ಗೆ

೧೭೩ (೩೪೧) ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯವರು ೧೯೮೫ನೇ ಏಪ್ರಿಲ್ ಮಾಹೆಯಿಂದ ಈವರೆವಿಗೆ ವೆಚ್ಚ ಮಾಡಿರುವ ಹಣವೆಷ್ಟು?

ಆ) ಈ ಹಣವನ್ನು ಯಾವ ಯಾವ ಬಾಬುಗಳಿಗೆ ವೆಚ್ಚ ಮಾಡಲಾಗಿದೆ (ಬಾಬುವಾರು ವಿವರ ನೀಡುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯವರು ೧೯೮೫ನೇ ಏಪ್ರಿಲ್‌ನಿಂದ ೧೯೮೬ನೇ ಜುಲೈವರೆಗೆ ವೆಚ್ಚ ಮಾಡಿರುವ ಹಣದ ವಿವರಗಳು ಈ ಕೆಳಕಂಡಂತಿವೆ.

	೧೯೮೫ನೇ ಏಪ್ರಿಲ್‌ನಿಂದ ೧೯೮೬ನೇ ಜುಲೈವರೆಗೆ ವೆಚ್ಚ (ಲಕ್ಷ ರೂ.ಗಳಲ್ಲಿ)
ರಸ್ತೆಗಳು	೪೩.೪೪
ಸೇತುವೆಗಳು	೧.೫೫
ಕಟ್ಟಡಗಳು	೧೫.೨೮
ಸಣ್ಣ ನೀರಾವರಿ	೩೭.೫೨೫

ಕೃಷಿ ಇಲಾಖೆಯ ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆಯ ಬಗ್ಗೆ

೧೭೪ (೩೦೦) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಷ್ಟ್ರೀಯ ಎಣ್ಣೆಕಾಳು ಅಭಿವೃದ್ಧಿ ಯೋಜನೆಗೆ ಆಳವಡಿಸಲಾದ ಕ್ಷೇತ್ರವೆಷ್ಟು?

ಆ) ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕರ್ನಾಟಕ ರಾಜ್ಯ ಎಣ್ಣೆಕಾಳು ಬೆಳೆಗಾರರ ಮಹಾಮಂಡಲಕ್ಕೆ ಸರ್ಕಾರದವರು ವಹಿಸಿಕೊಡಲು ಯೋಚಿಸಿರುವರೇ?

ಇ) ಹಾಗಿದ್ದಲ್ಲಿ ಯಾವಾಗ ಈ ಯೋಜನೆಯನ್ನು ಕರ್ನಾಟಕ ರಾಜ್ಯ ಎಣ್ಣೆಕಾಳು ಬೆಳೆಗಾರರ ಮಹಾ ಮಂಡಲಕ್ಕೆ ವಹಿಸಲಾಗುವುದು?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ೧೨,೫೬,೯೦೦ ಹೆಕ್ಟೇರ್ ಪ್ರದೇಶವನ್ನು ಆಳವಡಿಸಲಾಗಿದೆ.